7 ● RF(A)/100/3352

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]

Total No. of Questions : 38 ]

**ಸಂಕೇತ ಸಂಖ್ಯೆ : 85-K**

**Code No. : 85-K**

# A

**CCE RF**
**REVISED**
**FULL SYLLABUS**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 15. 04. 2023 ] [ Date : 15. 04. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

**ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $8 \times 1 = 8$**

1. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಮಾಡಿದ ಮೊದಲ ಸಂಸ್ಥಾನ

 (A) ಔದ್‌ನ ನವಾಬ

 (B) ಜುನಾಗಢದ ನವಾಬ

 (C) ಹೈದರಾಬಾದಿನ ನಿಜಾಮ

 (D) ಗ್ವಾಲಿಯರ್‌ನ ಸಿಂಧಿಯಾ

2. ಗೋವಾ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದುದು

 (A) 1951

 (B) 1961

 (C) 1953

 (D) 1963

3. ಡಾ. ಡಿ.ಎಂ. ನಂಜುಡಪ್ಪ ಸಮಿತಿ ರಚನೆಯಾದ ಉದ್ದೇಶ

(A) ಕೋಮುವಾದ ತಡೆಯಲು

(B) ಪ್ರಾದೇಶಿಕವಾದ ತಡೆಯಲು

(C) ಅನಕ್ಷರತೆ ತಡೆಯಲು

(D) ಭ್ರಷ್ಟಾಚಾರ ತಡೆಯಲು

4. 'ಮಾನವ ಕುಲ ತಾನೊಂದೇ ವಲಂ' ಎಂದು ಹೇಳಿದವರು

(A) ಪಂಪ

(B) ರನ್ನ

(C) ಜನ್ನ

(D) ಪೊನ್ನ

5. ರಾಜೇಶನು ಇಪ್ಪತ್ತೈದು ಸಾವಿರ ರೂಪಾಯಿಯ ಟಿ.ವಿ.ಯನ್ನು ಕೊಳ್ಳುತ್ತಾನೆ. ಅದು ಎರಡೇ ದಿನದಲ್ಲಿ ಕೆಟ್ಟುಹೋಗುತ್ತದೆ. ಅವನ ಅಹವಾಲನ್ನು ಟಿ.ವಿ. ಕಂಪನಿ ಮನ್ನಿಸುವುದಿಲ್ಲ. ರಾಜೇಶನು ದೂರು ಸಲ್ಲಿಸಬೇಕಾದ ಗ್ರಾಹಕ ವೇದಿಕೆಯು

(A) ಜಿಲ್ಲಾ ಗ್ರಾಹಕ ವೇದಿಕೆ

(B) ರಾಜ್ಯ ಗ್ರಾಹಕ ಅಯೋಗ

(C) ರಾಷ್ಟ್ರೀಯ ಗ್ರಾಹಕ ಅಯೋಗ

(D) ತಾಲೂಕು ಗ್ರಾಹಕ ವೇದಿಕೆ

6. ಇವುಗಳಲ್ಲಿ ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಿಗೆ ಒಂದು ಉತ್ತಮ ಉದಾಹರಣೆ

(A) ಪವನ ಶಕ್ತಿ

(B) ಉಬ್ಬರವಿಳಿತ ಶಕ್ತಿ

(C) ಸೌರಶಕ್ತಿ

(D) ಸ್ವಾಭಾವಿಕ ಅನಿಲ

7. ನೀತಿ ಆಯೋಗದ ನೇತೃತ್ವವನ್ನು ಪ್ರಧಾನ ಮಂತ್ರಿಗಳು ವಹಿಸಿಕೊಂಡಿದ್ದರೆ ಅದರ ದಿನವಹಿ ಆಡಳಿತವನ್ನು ನೋಡಿಕೊಳ್ಳುವವರು

(A) ರಾಷ್ಟ್ರಪತಿಗಳು

(B) ಕಾರ್ಯದರ್ಶಿಗಳು

(C) ಉಪ ಪ್ರಧಾನಿಗಳು

(D) ಉಪಾಧ್ಯಕ್ಷರು

8. ಬಾಲ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಲಾದ ವರ್ಷ

(A) 1988

(B) 1994

(C) 1986

(D) 2006

**II.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8

9. ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು ?

10. ಪ್ರಥಮ ವಿಶ್ವಸಮರಕ್ಕೆ ತತ್‌ಕ್ಷಣದ ಕಾರಣವೇನು ?

11. ಕೋಮುವಾದ ಎಂದರೇನು ?

12. ಪೂರ್ವಾಗ್ರಹ ಎಂದರೇನು ?

13. ಕಾಲಬೈಸಾಕಿ ಎಂದರೇನು ?

14. ಗಂಗಾನದಿ ಮುಖಜ ಭೂಮಿಯ ಮ್ಯಾಂಗ್ರೋವ್ ಅರಣ್ಯಗಳನ್ನು ಸುಂದರಬನ ಎಂದು ಏಕೆ ಕರೆಯುತ್ತಾರೆ ?

15. ಕೊರತೆಯ ಆಯವ್ಯಯ ಎಂದರೇನು ?

16. ಬ್ಯಾಂಕುಗಳು ತಾವು ನೀಡುವ ಸೇವೆಗೆ ಸೇವಾಶುಲ್ಕ ವಸೂಲು ಮಾಡುವ ಬ್ಯಾಂಕ್‌ಖಾತೆ ಯಾವುದು ?

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **8 × 2 = 16**

17. ಅನಕ್ಷರತೆಯನ್ನು ಹೋಗಲಾಡಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಅಥವಾ**

ಭಯೋತ್ಪಾದಕತೆಯ ನಿಗ್ರಹಕ್ಕೆ ಭಾರತ ಕೈಗೊಂಡಿರುವ ಕ್ರಮಗಳಾವವು ?

18. ಸಾಮಾಜಿಕ ಸ್ತರವಿನ್ಯಾಸವು ಎಲ್ಲಾ ದೇಶಗಳಲ್ಲೂ ಒಂದೇ ತೆರನಾಗಿಲ್ಲ. ವಿವರಿಸಿ.

**ಅಥವಾ**

ದೊಂಬಿಯ ಸ್ವರೂಪವನ್ನು ವಿವರಿಸಿ.

19. '1909 ರ ಭಾರತೀಯ ಪರಿಷತ್ ಕಾಯ್ದೆಯ ಮೂಲಕ ಬ್ರಿಟಿಷರು ಭಾರತೀಯರನ್ನು ಒಡೆದು ಆಳುವ ನೀತಿ ತೋರಿದರು.' ದೃಢೀಕರಿಸಿ.

20. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳೇನು ?

21. ಭಾರತದಲ್ಲಿ ನೀರಾವರಿಯು ಅವಶ್ಯಕ. ಏಕೆ ?

22. ಭಾರತದ ಪೂರ್ವ ಕರಾವಳಿಯು ಅತಿಹೆಚ್ಚು ಚಂಡಮಾರುತ ಪೀಡಿತ ಪ್ರದೇಶವಾಗಿದೆ. ಏಕೆ ?

23. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವವು ?

24. ಗ್ರಾಹಕ ರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು ?

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. "ನಾಲ್ವಡಿ ಕೃಷ್ಣರಾಜ ಒಡೆಯರು ತನ್ನ ಪ್ರಜೆಗಳಲ್ಲಿ ವಿದ್ಯಾಭ್ಯಾಸವು ವ್ಯಾಪಕವಾಗಿ ಹರಡಲು ಆಸಕ್ತರಾಗಿದ್ದರು." ದೃಢೀಕರಿಸಿ.

26. ಬಕ್ಸಾರ್ ಕದನದ ಪರಿಣಾಮಗಳನ್ನು ತಿಳಿಸಿ.

27. ಪ್ರಾರ್ಥನಾ ಸಮಾಜದ ಗುರಿಗಳೇನು ?

**ಅಥವಾ**

ಮಂದಗಾಮಿಗಳು ಬ್ರಿಟಿಷ್ ಸರ್ಕಾರದ ಮುಂದಿಟ್ಟ ಬೇಡಿಕೆಗಳಾವವು ?

28. ಜಗತ್ತಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್.ನ ಪಾತ್ರವನ್ನು ವಿಶ್ಲೇಷಿಸಿ.

29. ಅಸಂಘಟಿತ ವಲಯದ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪಟ್ಟಿಮಾಡಿ.

30. ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಸ್ಪಷ್ಟೀಕರಿಸಿ.

31. ಭಾರತದ ಪೂರ್ವತೀರದಲ್ಲಿ ಕಂಡುಬರುವ ಪ್ರಮುಖ ಬಂದರುಗಳನ್ನು ಪಟ್ಟಿಮಾಡಿ.

**ಅಥವಾ**

ಭೂಕಂಪದ ಮುನ್ನೆಚ್ಚರಿಕೆಯ ಕ್ರಮಗಳನ್ನು ಪಟ್ಟಿಮಾಡಿ.

32. ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ನಿರ್ವಹಿಸುವ ಪಾತ್ರವೇನು ?

**ಅಥವಾ**

ಕೇಂದ್ರ ಸರ್ಕಾರವು ಸಂಗ್ರಹಿಸುವ ತೆರಿಗೆಯೇತರ ಆದಾಯದ ಮೂಲಗಳಾವುವು ?

33. ಉದ್ಯಮಶೀಲತೆಯ ಗುಣಲಕ್ಷಣಗಳನ್ನು ತಿಳಿಸಿ.

**ಅಥವಾ**

ಬ್ಯಾಂಕುಗಳು ಗ್ರಾಹಕನಿಗೆ ಹಲವಾರು ಸೇವೆಗಳನ್ನು ಸಲ್ಲಿಸುತ್ತವೆ. ವಿವರಿಸಿ.

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ಭಾರತ ಒಕ್ಕೂಟಕ್ಕೆ ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ. ಹೇಗೆ ?

35. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ಭಾರತದ ಬಾಂಧವ್ಯ ಹದಗೆಟ್ಟಿದೆ. ಏಕೆ ?

36. "ಭಾರತದ ಆರ್ಥಿಕತೆಯಲ್ಲಿ ವ್ಯವಸಾಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ." ಸ್ಪಷ್ಟೀಕರಿಸಿ.

37. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಹಾಗೂ ಆರ್ಥಿಕ ಕಾರಣಗಳನ್ನು ವಿವರಿಸಿ.

**ಅಥವಾ**

ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿ.

**VI.** 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : **1 + 4 = 5**

a) $82\frac{1}{2}^{o}$ ಪೂರ್ವ ರೇಖಾಂಶ

b) ಕೊಚ್ಚಿ

c) ವಿಶಾಖ ಪಟ್ಟಣಂ

d) ಕೋಯ್ನಾ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. 5